**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಮಗಳೂರು**

<u>ಸತ್ರ ಮೊಕದ್ದಮೆ ನಂಃ **95/2024**</u>

| | | |
|---|---|---|
| ಸಾಕ್ಷಿದಾರರ ಹೆಸರು | - ಉಮೇಶ್ | ಪಿಡಬ್ಲೂ -11 |
| ತಂದೆಯ ಹೆಸರು | - ಮಗಣ್ಣಗೌಡ | ಸಿಡಬ್ಲೂ -27 |
| ವಯಸ್ಸು | - 42 ವರ್ಷ | |
| ಉದ್ಯೋಗ | - ಪೇದೆ 359, ಚಿಕ್ಕಮಗಳೂರು ನಗರ ಪೊಲೀಸ್ ಠಾಣೆ | |
| ವಾಸ ಸ್ಥಳ | - ಚಿಕ್ಕಮಗಳೂರು | |

*(*ಆರೋಪಿಯು ನ್ಯಾಯಾಂಗ ಬಂಧನದಲ್ಲಿದ್ದು, ಆತನನ್ನು ಈ ದಿನ ***Google meet*** ನಲ್ಲಿ ವೀಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಕಾರಾಗೃಹದಿಂದ ಹಾಜರುಪಡಿಸಲಾಗಿರುತ್ತದೆ. ಸಾಕ್ಷಿಯ ವಿಚಾರಣೆಯನ್ನು ದಾಖಲಿಸುವ ಮೊದಲು ಆರೋಪಿಗೆ ಸಾಕ್ಷಿ ಮಾತನಾಡುವುದು ಸರಿಯಾಗಿ ಕೇಳಿಸುತ್ತಿದೆ ಮತ್ತು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ಸಾಕ್ಷಿಯ ವಿಚಾರಣೆಯನ್ನು ದಾಖಲಿಸಲು ಯಾವುದೇ ತಾಂತ್ರಿಕ ಸಮಸ್ಯೆ ಇಲ್ಲವೆಂದು ಖಾತ್ರಿಪಡಿಸಿಕೊಳ್ಳಲಾಯಿತು.*)*

ದಿನಾಂಕಃ 31-12-2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>

1. ದಿಃ 23-08-2022 ರಿಂದ ನಾನು ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 10-05-2024 ರಂದು ತನಿಖಾಧಿಕಾರಿಗಳಾದ ಚಾಸಾ.32 ರವರು ಚಿಕ್ಕಮಗಳೂರು ಜಿಲ್ಲಾ ಆಸ್ಪತ್ರೆಯ ಶವಗಾರದಲ್ಲಿ ಶವ ತನಿಖೆಯನ್ನು ನಡೆಸುವ ಸಮಯದಲ್ಲಿ ನಾನು ಅವರ ಮೌಖಿಕ ಆದೇಶದ ಮೇರೆಗೆ ನನ್ನ ವಿವ್ರೋ ಕಂಪನಿಯ ವಿ25 ಮೊಬೈಲಿನಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.3 ಮತ್ತು 4 ಎಂದು ಗುರುತಿಸಲಾಗಿರುತ್ತದೆ.

3. ನಂತರ ಅದೇ ದಿನ ಚಾಸಾ.32 ರವರು ಕೃತ್ಯ ನಡೆದ ಸ್ಥಳದಲ್ಲಿ ಪಂಚನಾಮೆಯನ್ನು ಜರುಗಿಸಿದ್ದು ಆ ಸಮಯದಲ್ಲಿ ನಾನು ಅವರ ಮೌಖಿಕ ಆದೇಶದ ಮೇರೆಗೆ ಮೇಲೆ ಹೇಳಿದ ನನ್ನ ವಿವ್ರೋ ಕಂಪನಿಯ ವಿ25 ಮೊಬೈಲಿನಲ್ಲಿ ಫೋಟೋವನ್ನು ತೆಗೆದಿರುತ್ತೇನೆ. ಸಾಕ್ಷಿ ಸದರಿ ಫೋಟೋವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿರುತ್ತದೆ.

4. ನಂತರ ಚಾಸಾ.32 ರವರು ಆರೋಪಿ ತೋರಿಸಿದಂತೆ ಪಂಚನಾಮೆಯನ್ನು ಜರುಗಿಸಿದ್ದು ಆ ಸಮಯದಲ್ಲಿ ನಾನು ಅವರ ಮೌಖಿಕ ಆದೇಶದ ಮೇರೆಗೆ ಮೇಲೆ ಹೇಳಿದ ನನ್ನ ವಿವ್ರೋ ಕಂಪನಿಯ ವಿ25 ಮೊಬೈಲಿನಲ್ಲಿ ಫೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿ ಸದರಿ ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ.12 ಮತ್ತು ಪಿ.13 ಎಂದು ಗುರುತಿಸಲಾಗಿರುತ್ತದೆ.

5. ನಂತರ ತನಿಖಾಧಿಕಾರಿಗಳ ಆದೇಶದ ಮೇರೆಗೆ ಸದರಿ ಫೋಟೋಗಳನ್ನು ಯಥಾಸ್ಥಿತಿಯಲ್ಲಿ ನಗರ ಪೊಲೀಸ್ ಠಾಣೆಗೆ ಒದಗಿಸಲಾಗಿದ್ದ ಕಂಪ್ಯೂಟರಿಗೆ ವರ್ಗಾಯಿಸಿ ಅವುಗಳ ಹ್ಯಾಶ್ ಡೌನ್ ಲೋಡ್ ಮಾಡಿ ನಂತರ ಅವುಗಳನ್ನು ಒಂದು ಹೆಚ್.ಪಿ. ಕಂಪನಿಯ ಖಾಲಿ ಸಿಡಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿರುತ್ತೇನೆ. ನಂತರ ಸದರಿ ಫೋಟೋಗಳನ್ನು ಚಿಕ್ಕಮಗಳೂರಿನ ಕಪಾಲಿ ಸ್ಟುಡಿಯೋದವರಿಗೆ ಕೊಟ್ಟು ಅವರಿಂದ ಅವುಗಳನ್ನು ಪ್ರಿಂಟ್ ಹಾಕಿಸಿ ತನಿಖಾಧಿಕಾರಿಗಳಿಗೆ ನೀಡಿರುತ್ತೇನೆ. ಸದರಿ ಫೋಟೋಗಳನ್ನು ತೆಗೆಯುವ ಸಮಯದಲ್ಲಿ ನನ್ನ ಮೊಬೈಲ್ ಸುಸ್ಥಿತಿಯಲ್ಲಿ ಇತ್ತು ಮತ್ತು ಅವುಗಳನ್ನು ಮೇಲೆ ಹೇಳಿದಂತೆ ವರ್ಗಾಯಿಸಿದ ಕಂಪ್ಯೂಟರ್ ಸಹ ಸುಸ್ಥಿತಿಯಲ್ಲಿ ಇತ್ತು.

6. ನಂತರ ಅದೇ ದಿನ ಆ ಬಗ್ಗೆ ಭಾರತೀಯ ಸಾಕ್ಷ್ಯ ಅಧಿನಿಯಮ 63(4)(ಸಿ) ರಡಿಯಲ್ಲಿ ದೃಢೀಕರಣ ಪತ್ರವನ್ನು ತಯಾರಿಸಿ ಅದನ್ನು ನಾನು ಫೋಟೋಗಳನ್ನು ವರ್ಗಾಯಿಸಿದ ಸಿಡಿಯೊಂದಿಗೆ ಚಾಸಾ.33 ರವರಿಗೆ ನೀಡಿದೆನು. ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಸದರಿ ಸಿಡಿ ಮತ್ತು ದೃಢೀಕರಣ ಪತ್ರವನ್ನು ಕ್ರಮವಾಗಿ ನಿಪಿ.23 ಮತ್ತು ನಿಪಿ.24 ಎಂದು ಗುರುತಿಸಲಾಯಿತು. ನಿಪಿ.24 ರಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.24(ಎ) ಮತ್ತು ಪಿ.24(ಬಿ) ಎಂದು ಗುರುತಿಸಲಾಯಿತು.

7. ನನಗೆ ಫೋಟೋಗಳನ್ನು ತೆಗೆಯುವ ಬಗ್ಗೆ ಮತ್ತು ಅವುಗಳನ್ನು ಕಂಪ್ಯೂಟರಿಗೆ ವರ್ಗಾಯಿಸುವ ಬಗ್ಗೆ ಮತ್ತು

ಕಂಪ್ಯೂಟರಿನಿಂದ ಸಿಡಿಗೆ ವರ್ಗಾಯಿಸುವ ಬಗ್ಗೆ ಪರಿಣಿತಿ ಇರುತ್ತದೆ. ಇಲಾಖಾ ವತಿಯಿಂದ ನನಗೆ ಕಂಪ್ಯೂಟರ್ ಬಗ್ಗೆ ತರಬೇತಿಯನ್ನು ನೀಡಲಾಗಿರುತ್ತದೆ ಮತ್ತು ನಾನು ಕಂಪ್ಯೂಟರ್ ಲಿಟರೆಸಿ ಟೆಸ್ಟ್‌ನಲ್ಲಿ ತೇರ್ಗಡೆ ಹೊಂದಿರುತ್ತೇನೆ.

ಪಾಟೀ ಸವಾಲುಃ ಆರೋಪಿಯ ಪರವಾಗಿಃ **LADCS** ನ **Deputy Chief Defense counsel** ಆದ ಶ್ರೀ ಎನ್.ಡಿ ವಕೀಲರಿಂದಃ

8. ನೀವು ಫೋಟೋಗಳನ್ನು ತೆಗೆದಿದ್ದೀರಿ ಎನ್ನಲಾದ ಮೊಬೈಲಿನಲ್ಲಿ ಫೋಟೋಗಳ ಮೇಲೆ ಅವುಗಳನ್ನು ತೆಗೆದ ಲೋಕೇಷನ್, ದಿನಾಂಕ ಮತ್ತು ಸಮಯವನ್ನು ನಮೂದು ಮಾಡುವ ವ್ಯವಸ್ಥೆ ಇದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮ್ಮ ಮೊಬೈಲಿನಲ್ಲಿ ಫೇಸ್ ಬುಕ್, ವಾಟ್ಸಾಪ್, ಇನಸ್ಟಾಗ್ರಾಂ ಮತ್ತು ಗೂಗಲ್ ಆಪ್ಲಿಕೇಷನ್ ಗಳು ಇವೆ ಎಂದರೆ ಸರಿ. ಗೂಗಲ್ ಟ್ಯಾಗ್ ನ್ನು ಆನ್ ಮಾಡಿಕೊಂಡು ಫೋಟೋಗಳನ್ನು ತೆಗೆದರೆ ಅವುಗಳನ್ನು ತೆಗೆದ ಲೋಕೇಷನ್, ದಿನಾಂಕ ಮತ್ತು ಸಮಯವನ್ನು ನಮೂದು ಆಗುತ್ತದೆ ಎಂದರೆ ಸರಿ. ಅದನ್ನು ನೀವು ಆನ್ ಮಾಡಿಕೊಂಡು ಫೋಟೋಗಳನ್ನು ತೆಗೆಯಲು ತೊಂದರೆ ಇತ್ತೇ ಎಂದರೆ ಸಾಕ್ಷಿ ನಾನು ನಾರ್ಮಲ್ ಕ್ಯಾಮೆರದಲ್ಲಿ ಫೋಟೋ ತೆಗೆದಿದ್ದೇನೆ ಎನ್ನುತ್ತಾರೆ.

9. ನೀವು ಮೊಬೈಲಿನಲ್ಲಿ ತೆಗೆದ ಫೋಟೋಗಳನ್ನು ಕಂಪ್ಯೂಟರಿಗೆ

ಯಾವ ರೀತಿ ವರ್ಗಾಯಿಸಿದ್ದೀರಿ ಎಂದರೆ ಸಾಕ್ಷಿ ಇ-ಮೇಲ್ ಮುಖಾಂತರ ಎನ್ನುತ್ತಾರೆ. ಹ್ಯಾಶ್ ವಾಲ್ಯೂವನ್ನು ಡೌನ್ ಲೋಡ್ ಮಾಡಲು ಯಾವ ಟೂಲ್ ನ್ನು ಬಳಸಿದ್ದೀರಿ ಎಂದರೆ ಸಾಕ್ಷಿ ಹ್ಯಾಶ್ ವಾಲ್ಯೂ ಆಪ್ ನಲ್ಲಿ ಪಾಸ್‌ವರ್ಡ್ ಹಾಕಿ ಡೌನ್ ಲೋಡ್ ಮಾಡಿದ್ದೇನೆ ಎನ್ನುತ್ತಾರೆ. ಫೋಟೋ ಒಬ್ಬರಿಂದ ಒಬ್ಬರಿಗೆ ವರ್ಗಾವಣೆಯಾದರೆ ಅದರ ಹ್ಯಾಶ್ ವಾಲ್ಯೂ ಚೇಂಜ್ ಆಗುತ್ತದೆ ಎಂದರೆ ಸರಿಯಲ್ಲ. ನೀವು ತೆಗೆದ 5 ಫೋಟೋಗಳ ಹ್ಯಾಶ್ ವಾಲ್ಯುಗಳನ್ನು ನಿಪಿ.24 ರಲ್ಲಿ ನಮೂದು ಮಾಡಿದ್ದೀರಾ ಎಂದರೆ ಸಾಕ್ಷಿ ಮಾಡಿದ್ದೇನೆ ಎನ್ನುತ್ತಾರೆ. ನಿಪಿ.24 ದೃಢೀಕರಣ ಪತ್ರದ ಪಾರ್ಟ್ ಎ ಮತ್ತು ಪಾರ್ಟ್ ಬಿ ಗಳನ್ನು ನೀವೇ ಭರ್ತಿ ಮಾಡಿ ಸಹಿ ಮಾಡಿದ್ದೀರಿ ಎಂದರೆ ಸರಿ.

10. ನೀವು ನಿಪಿ.24 ರಲ್ಲಿ ಕಂಡುಬರುವ SHA1 ರಲ್ಲಿಯೇ 5 ಫೋಟೋಗಳ ಹ್ಯಾಶ್ ವ್ಯಾಲುಗಳನ್ನು ನಮೂದಿಸಬೇಕಾಗಿತ್ತು ಎಂದರೆ ಸರಿಯಲ್ಲ. ಫೋಟೋಗಳನ್ನು ತೆಗೆದ ನನ್ನ ಮೊಬೈಲನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ. ನೀವು ಕಂಪ್ಯೂಟರ್ ಲಿಟರೆಸಿ ಟೆಸ್ಟ್ ನಲ್ಲಿ ತೇರ್ಗಡೆಯಾದ ಬಗ್ಗೆ ದಾಖಲೆಯನ್ನು ತನಿಖಾಧಿಕಾರಿಗಳಿಗೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವುದೇ ಪಂಚನಾಮೆಗಳಲ್ಲಿ ನೀವು ಫೋಟೋಗಳನ್ನು ತೆಗೆದ ಬಗ್ಗೆ ನಮೂದು ಮಾಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

11. ನಾನು ಎಂದಿಗೂ ಸಹ ಆರೋಪಿಯನ್ನು ಬೆಂಗಳೂರಿನ ಯಾವುದೇ ಆಸ್ಪತ್ರೆಗೆ ಕರೆದುಕೊಂಡು ಹೋಗಿಲ್ಲ.

ಚಿಕ್ಕಮಗಳೂರಿನ ಹಿರಿಯ ಸಿವಿಲ್ ಜಡ್ಜ ಮತ್ತು ಸಿಜೆಎಂ ನ್ಯಾಯಾಧೀಶರವರು ಕ್ರಿಮಿನಲ್ ಮಿಸ್ 307/2023 ರಲ್ಲಿ ಮಾಡಿದ್ದ ಆದೇಶದ ಮೇರೆಗೆ ಆರೋಪಿಯನ್ನು ನಿಮಾನ್ಸ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸುವಂತೆ ನಿಮ್ಮ ಠಾಣೆಗೆ ಸೂಚಿಸಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ತನಿಖಾಧಿಕಾರಿಗಳು ಆರೋಪಿ ತೋರಿಸಿದ ಮಹಜರ್ ಜರುಗಿಸುವ ಸಮಯದಲ್ಲಿ ನಾನು ಆತನನ್ನು ನೋಡಿದ್ದನ್ನು ಹೊರತುಪಡಿಸಿ ಎಂದೂ ಆತನನ್ನು ನೋಡಿರಲಿಲ್ಲ.

12. ನೀವು ಫೋಟೋಗಳ ಮೇಲೆ ಅವುಗಳನ್ನು ತೆಗೆದ ಲೋಕೇಷನ್, ದಿನಾಂಕ ಮತ್ತು ಸಮಯ ನಮೂದಾಗುವ ಬಗ್ಗೆ ನಿಮಗೆ ಮಾಹಿತಿ ಇದ್ದರೂ ಸಹ ಉದ್ದೇಶಪೂರ್ವಕವಾಗಿ ನೀವು ಆ ಬಗ್ಗೆ ವ್ಯವಸ್ಥೆ ಮಾಡಿಕೊಳ್ಳದೇ ಫೋಟೋಗಳನ್ನು ತೆಗೆದಿದ್ದೀರಾ ಎಂದರೆ ಸರಿಯಲ್ಲ. ನೀವು ತೆಗೆದ ಫೋಟೋಗಳ ಹ್ಯಾಶವ್ಯಾಲೂ ಮತ್ತು ಫೋಟೋಗಳನ್ನು ವರ್ಗಾಯಿಸಿದ ಹ್ಯಾಶವ್ಯಾಲು ಒಂದೇ ಎಂದು ದೃಢೀಕರಿಸಿಲ್ಲ ಎಂದರೆ ಸರಿಯಲ್ಲ.

13. ತನಿಖಾ ಕಾಲದಲ್ಲಿ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ನೀವು ನಿಮ್ಮ ಮೊಬೈಲಿನಲ್ಲಿ ಮೇಲೆ ಗುರುತಿಸಿದ ಫೋಟೋಗಳನ್ನು ತೆಗೆದಿದ್ದಾಗಿ, ಅವುಗಳನ್ನು ಕಂಪ್ಯೂಟರಿಗೆ ನಂತರ ಸಿಡಿಗೆ ಯಥಾಸ್ಥಿತಿಯಲ್ಲಿ ವರ್ಗಾಯಿಸಿರುವುದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನೀವು ತೆಗೆದ ಫೋಟೋಗಳನ್ನು ಕಪಾಲಿ ಫೋಟೋ ಸ್ಟುಡಿಯೋದಲ್ಲಿ ಪ್ರಿಂಟ್ ಹಾಕಿಸಿದ್ದಾಗಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ.

14. ಸರ್ಕಾರದಿಂದ ನಿಮ್ಮ ಠಾಣೆಗೆ ಡಿಜಿಟಲ್ ಕ್ಯಾಮೆರವನ್ನು ಒದಗಿಸಲಾಗಿದೆ ಎಂದರೆ ಸರಿ. ಅದರಲ್ಲಿ ಫೋಟೋ ತೆಗೆಯಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಠಾಣೆಗೆ ಒಂದೇ ಕ್ಯಾಮೆರವನ್ನು ಕೊಟ್ಟಿರುವುದು ಅದನ್ನು ಎಲ್ಲಾ ಪ್ರಕರಣದ ತನಿಖೆಗೆ ಬಳಸಲಾಗುತ್ತದೆ, ಹಾಗಾಗಿ ಅದು ಸ್ವಿಚ್ ಆಫ್ ಆಗಿತ್ತು, ಆದ್ದರಿಂದ ನನ್ನ ಮೊಬೈಲಿನಲ್ಲಿ ಫೋಟೋಗಳನ್ನು ತೆಗೆದಿದ್ದೇನೆ ಎನ್ನುತ್ತಾರೆ.

15. ನೀವು ಹೇಳಿದಂತೆ ದಿನಾಂಕ ಮತ್ತು ಸ್ಥಳಗಳಲ್ಲಿ ಯಾವುದೇ ಫೋಟೋಗಳನ್ನು ನಿಮ್ಮ ಮೊಬೈಲಿನಲ್ಲಿ ತೆಗೆದಿಲ್ಲ ಎಂದರೆ ಸರಿಯಲ್ಲ. ನೀವು ಹೇಳಿದಂತೆ ಯಾವುದೇ ಕರ್ತವ್ಯವನ್ನು ನಿಬಾಯಿಸದೇ ಇದ್ದರು ಸಹ ನಿಮ್ಮ ಮೇಲಾಧಿಕಾರಿಗಳ ಮಾತನ್ನು ಕೇಳಿ ನಿಪಿ.23 ಮತ್ತು ಪಿ.24 ರಂತೆ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನೀಡಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಭಾನುಮತಿ ಬಿ.ಸಿ)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ